OS No. 34/2020
ಪಿ ಡಬ್ಲ್ಯೂ -01

**ದಿನಾಂಕ 17-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಸಾಕ್ಷಿಗೆ ಒಂದು ದೃಢಿಕೃತ ಕ್ರಯಪತ್ರವನ್ನು ತೋರಿಸಿ ಸದ್ರಿ ಕ್ರಯಪತ್ರದಲ್ಲಿ ನನ್ನ ಸಹೋದರ 2 ನೇ ಪ್ರತಿವಾದಿ ನಂದಾಗೋಪಾಲ ಕೊಡ್ಗಿರವರು Mayrose S Kundar ರವರಿಗೆ Flat ನ್ನು ಮಾರಾಟ ಮಾಡಿದ ಬಗ್ಗೆ ದಾಖಲೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಅದನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಮಾಡಿಸಿದ್ದಾನೆ ಎಂದು ತಿಳಿಸಿರುತಾರೆ. ಸದ್ರಿ ಕ್ರಯಪತ್ರವನ್ನು ನಿಡಿ-8 ಎಂದು ಗುರುತಿಸಲಾಯಿತು. ಕ್ರಯಪತ್ರವನ್ನು ಒಪ್ಪುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಮಾಡಿಸಿದ್ದಾನೆ ಎಂದು ತಿಳಿಸಿರುತಾರೆ. ಈ ಕ್ರಯಪತ್ರದಲ್ಲಿ ಇರುವ ಆಸ್ತಿ ಕೂಡ ಪಾಲು ಆಗತಕ್ಕಂತ ಆಸ್ತಿ . ಈ ಆಸ್ತಿಯನ್ನು ದಾವೆಯಲ್ಲಿ ಕಾಣಿಸಿಲ್ಲ . ಈ ಆಸ್ತಿಯಲ್ಲಿ ಏಕೆ ವಿಭಾಗ ಕೇಳಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ವಕೀಲರು ನಂತರ ಕೊಡುವ ಎಂದು ಹೇಳಿದರು ಎಂದು ತಿಳಿಸಿರುತ್ತಾರೆ. ನಿಮ್ಮ ತಾಯಿ settlement deed ಮಾಡಿ ಕೊಟ್ಟಿರುವುದನ್ನು ನೀವು ಒಪ್ಪುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಮಾಡಿಸಿದ್ದಾನೆ ಎಂದು ತಿಳಿಸಿರುತಾರೆ. ಈ settlement deed ರದ್ದಾಗಬೇಕು ನಾನು ಕೇಳಿಲ್ಲ . ಅದೇ ರೀತಿ ಈಗ ತೋರಿಸಿದ ಕ್ರಯಪತ್ರ ಕೂಡ ರದ್ದಾಗಬೇಕು ಎಂದು ನಾನು ಕೇಳಿಲ್ಲ . ಕೊಡ್ಗಿ ಸಾಯಿ ಸದನ ಅಪಾರ್ಟ್ಮೆಂಟ್ ನನ್ನ ತಾಯಿಯ ಏಕಮಾಲೀಕತ್ವಕ್ಕೆ ಒಳಪಟ್ಟ ಅಪಾರ್ಟ್ ಮೆಂಟ್ ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎಂದು ತಿಳಿಸಿರುತ್ತಾರೆ . ಕೊಡ್ಗಿ ಸಾಯಿ ಸದನ ಅಪಾರ್ಟ್ಮೆಂಟ್ ನ ಎಲ್ಲಾ ದಾಖಲೆಗಳು ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಕೆಲವು ದಾಖಲೆಗಳನ್ನು ನೋಡಿದಾಗ ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದು ತಿಳಿಸಿರುತ್ತಾರೆ . ಕೊಡ್ಗಿ ಸಾಯಿ ಸದನ ಅಪಾರ್ಟ್ಮೆಂಟ್ ಗೆ ಸಂಬಂಧಪಟ್ಟಂತೆ 76 ಬಡಗಬೆಟ್ಟು ಕೋಆಪರೇಟಿವ್ ಸೊಸೈಟಿ , ಇಂದ್ರಾಳಿ ಶಾಖೆಯಲ್ಲಿ ಮಾಡುತಿದ್ದರುಎಂದರೆ ಸಾಕ್ಷಿ ಒಂದನೇ

ಪ್ರತಿವಾದಿಯಾದ ನನ್ನ ಅಣ್ಣನೇ ಮಾಡುತಿದ್ದರು ಎಂದು ತಿಳಿಸಿರುತ್ತಾರೆ .ಕೊಡ್ಗಿ ಸಾಯಿ ಸದನ ಅಪಾರ್ಟ್ಮೆಂಟ್ ನ ಖಾತೆ ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ನನಗೆ ನೆನಪು ಆಗುತ್ತಿಲ್ಲ . ಅದೇ ಖಾತೆಯ ಮೂಲಕ ಕೊಡ್ಗಿ ಸಾಯಿ ಸದನ ಅಪಾರ್ಟ್ಮೆಂಟ್ ನ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸಲಾಗುತಿತ್ತು ಎಂದರೆ ಸಾಕ್ಷಿ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಮಾಡುತಿದ್ದರು ಎಂದು ತಿಳಿಸಿರುತ್ತಾರೆ .ಕೊಡ್ಗಿ ಸಾಯಿ ಸದನ ಅಪಾರ್ಟ್ಮೆಂಟ್ ಕಟ್ಟಲು ಒಂದು ಚದರಡಿಗೆ ರೂ 230 ಆಗಿರುತ್ತದೆ. ಎಷ್ಟು ಎಸ್ಟಿಮೇಟ್ ಆಯಿತು ಎಂದು ನನಗೆ ಗೊತ್ತಿಲ್ಲ ಎಲ್ಲವನ್ನು ಒಂದನೇ ಪ್ರತಿವಾದಿ ನೋಡಿಕೊಳ್ಳುತಿದ್ದರು. ರೂ 230/- 1 ಚದರಡಿಗೆ ಆಯಿತು ಎಂದು ಯಾವ ಆದಾರದಲ್ಲಿ ಹೇಳುತಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಲೆಕ್ಕ ಮಾಡಿ ಹೇಳುತಿದ್ದರು ಎಂದು ತಿಳಿಸಿರುತ್ತಾರೆ. flat ಗಳನ್ನು ಮಾರಾಟ ಮಾಡಿದ ಬಗ್ಗೆ ನಿಪಿ 1 ರಿಂದ 29 ದಾಖಲೆಗಳನ್ನು ಒಪ್ಪುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಪ್ಪುತ್ತೇನೆ ಆದರೇ ಕ್ರಯಪತ್ರದಲ್ಲಿ Stamp Duty ಉಳಿಸಲು ಕಡಿಮೆ ಮೊತ್ತವನ್ನು ಕಾಣಿಸಿರುತಾರೆ ಆದರೇ ಜಾಸ್ತಿ ಹಣಕ್ಕೆ ಮಾರಾಟ ಮಾಡಲಾಗಿದೆ ಮತ್ತು ಅದರಿಂದ ಬಂದ ಹಣದಿಂದಲೇ ಬೇರೆ ಬೇರೆ ಆಸ್ತಿಯನ್ನು ಖರೀದಿಸಲಾಗಿದೆ ಎಂದು ತಿಳಿಸಿರುತಾರೆ. ಕಟ್ಟದ ಆರಂಭದ ಲಗಾಯಿತಿನಿಂದ ಎಲ್ಲಾ ಮಾರಾಟ ಪೂರ್ತಿ ಆಗುವವರೆಗೆ ಪ್ರತಿ ವರ್ಷ ಐಟಿ ರಿಟನ್ಸ್ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ತಯಾರಿಸಿರುತಾರೆ ನನ್ನ ತಾಯಿ ಸಹಿ ಮಾತ್ರ ಮಾಡಿಕೊಡುತಿದ್ದರು . ಈ ಎಲ್ಲಾ ಐಟಿ ರಿಟನ್ಸ್ ಗಳನ್ನು ಪರಿಶೀಲಿಸಿ ಆದಾಯ ತೆರಿಗೆ ಇಲಾಖೆಯವರು ಆದೇಶಮಾಡಿದ್ದಾರೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಒಂದು ಬಾರಿ ಸಮಸ್ಯೆ ಆಗಿತ್ತು ಆಗ ನನ್ನ ಅಣ್ಣ ಒಂದನೇ ಪ್ರತಿವಾದಿ ಬೆಂಗಳೂರಿಗೆ ಹೋಗಿ ಕೇಂದ್ರ ಸಚಿವರಾದ ಅನಂತ್ ಕುಮಾರ್ ರವರಿಗೆ ಹೇಳಿಸಿ ಸರಿ ಮಾಡಿಸಿದ್ದಾರೆ ಎಂದು ತಿಳಿಸಿರುತ್ತಾರೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

OS No. 34/2020

ಪಿ ಡಬ್ಲ್ಯೂ -01

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.